ಇಂದು ದಿ:**14-07-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಕೆ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಗಳ ಪರಃ**

ನಾನು 8 ಜನರ ವಿರುದ್ದ ಈ ದಾವೆ ಸಲ್ಲಿಸಿದ್ದೇನೆ. ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನಗೆ ಆಸ್ತಿಗಳಲ್ಲಿ ಭಾಗ ಬೇಕು ಎಂದು ಕೇಳಿ ಈ ದಾವೆ ಮಾಡಿದ್ದೇನೆ. ನಾನು ನನ್ನ ತಂದೆಗೆ ಸೇರಿದ 4 ಸೈಟು ಮತ್ತು ಹೊಲದ ಕುರಿತು ಈ ದಾವೆ ಮಾಡಿದ್ದೇನೆ. ಮೊದಲನೇಯ ಆಸ್ತಿ ಐಟಂ ನಂಬರ್ 1 ರ ಸೈಟು ನಂಬರ್ 164 ಇರುತ್ತದೆ. ಸದರಿ ಸೈಟು, ರೈಲ್ವೆ ಬಳಿ ಇರುವ ಕೇಶವ ನಗರದಲ್ಲಿ ಬರುತ್ತದೆ. ಇದರ ವಿಸ್ತೀರ್ಣ 30X50 ಅಡಿ ಇರುತ್ತದೆ. ಇದರ Assessment ನಂಬರ್ ಹೇಳಲು ಬರುವುದಿಲ್ಲ.

**(ಸಾಕ್ಷಿಗೆ ಪಾರ್ಶ್ವವಾಯು ಹೊಡೆದಿದ್ದು ಎಂದು ವಾದಿ ಪರ ವಕೀಲರು ತಿಳಿಸಿದ್ದು, ಸಾಕ್ಷಿಯನ್ನು ಗಮನಿಸಲಾಗಿ ಅವರಿಗೆ ಉತ್ತರಕೊಡಲು ಸಹ ತೊಂದರೆ ಆಗುತ್ತಿರುವುದನ್ನು ಗಮನಿಸಿ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.